(ಸಾಕ್ಷಿಗೆ ದಿನಾಂಕ: 19.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ವೈ.ಆರ್.ಹೆಚ್., ವಾದಿಯರ ಪರ ವಕೀಲರಿಂದಃ**

ನಮ್ಮ ಕುಟುಂಬಕ್ಕೆ ದಾವಾ ಸ್ವತ್ತನ್ನು ಹೊರತುಪಡಿಸಿ ಇತರೆ ಆಸ್ತಿಗಳೂ ಇರುತ್ತವೆ. ನನ್ನ ಪ್ರತಿವಾದ ಪತ್ರದ 3ನೇ ಕಂಡಿಕೆಯಲ್ಲಿ ನಾನು ಮತ್ತು ಇತರೆ ಪ್ರತಿವಾದಿಯರು ಸಂಪೂರ್ಣ ಮಾಲೀಕರು ಎಂದು ಬರೆಸಲಾಗಿರುತ್ತದೆ. ನಾನು ಮತ್ತು ಇತರೆ ಪ್ರತಿವಾದಿಯರನ್ನು ಹೊರತುಪಡಿಸಿ ದಾವಾ ಸ್ವತ್ತಿಗೆ ಬೇರೆ ಯಾರಿಗೂ ಹಕ್ಕು, ಅಧಿಕಾರ ಮತ್ತು ಸ್ವಾಧೀನ ಇರುವುದಿಲ್ಲ. ಹಣದ ಭದ್ರತೆಗಾಗಿ ಕ್ರಯದ ಕರಾರು ಮಾಡಿಕೊಟ್ಟಿರುವ ಬಗ್ಗೆ ಎಲ್ಲಿಯೂ ದೂರು ನೀಡಿರುವುದಿಲ್ಲ. ನಿ.ಪಿ.1ರ ಕ್ರಯದ ಕರಾರು ಪತ್ರದಲ್ಲಿ ಹಣದ ಭದ್ರತೆಗಾಗಿ ಕರಾರು ಬರೆಯಲಾಗಿದೆ ಎಂಬ ಒಕ್ಕಣೆ ಇರುವುದಿಲ್ಲ. ಕ್ರಯದ ಕರಾರಿನ ರದ್ದತಿಗಾಗಿ ಯಾವುದೇ ಪ್ರಕರಣ ದಾಖಲಿಸಿಲ್ಲ. ನನ್ನ ತಕರಾರಿನಲ್ಲಿ ನಮೂದಿಸಿರುವಂತೆ 2% ಬಡ್ಡಿಯಂತೆ ವಾದಿಯರಿಂದ ಹಣ ಪಡೆದಿರುವುದಾಗಿ ಹೇಳಿದ್ದು, ಯಾವ ಯಾವ ದಿನಾಂಕ ಹಾಗೂ ಎಷ್ಟೆಷ್ಟು ಬಡ್ಡಿ ಹಣವನ್ನು ಯಾರಿಗೆ ಪಾವತಿ ಮಾಡಿರುತ್ತೇವೆ ಎಂದು ಹೇಳಿ ಬರೆಯಿಸಿರುವುದಿಲ್ಲ. ಬಡ್ಡಿ ಹಣವನ್ನು ವಾದಿಗೆ ಸಂದಾಯ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ವಾದಿಯರು ನೀಡಿರುವ ನೋಟೀಸಿಗೆ ನಾನು ಇಲ್ಲಿಯವರೆಗೂ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನೋಟಿಸಿಗೆ ಉತ್ತರ ನೀಡದೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.1ರ ಕರಾರಿನಲ್ಲಿ 2 ಎಕರೆ 36 ಗುಂಟೆ ಪೈಕಿ 1 ಎಕರೆ ಮಾತ್ರ ಕರಾರಿಗೆ ಒಳಪಟ್ಟಿದೆ ಎಂದರೆ ನನಗೆ ಗೊತ್ತಿಲ್ಲ. 1 ಎಕರೆಗೆ ಸಂಬಂಧಿಸಿದಂತೆ ನೋಂದಣಿಗೆ ಬೇಕಾದ ಪೋಡಿ ಮಾಡಿಸಲು ಅರ್ಜಿ ಸಲ್ಲಿಸಿಲ್ಲ. ಸದರಿ 1 ಎಕರೆಗೆ ಹದ್ದುಬಸ್ತು ಮಾಡಿರುವುದಿಲ್ಲ. ವಾದಿಯರು ಆರ್ಥಿಕವಾಗಿ ಅನುಕೂಲವಾಗಿದ್ದಾರೆ ಎಂದರೆ ಸರಿ. ಉಳಿಕೆ ರೂ.50 ಸಾವಿರ ಹಣ ನೀಡಿ ಕ್ರಯಪತ್ರ ಬರೆಸಿಕೊಳ್ಳಲು ವಾದಿಯರು ಶಕ್ತರಾಗಿರುತ್ತಾರೆ ಎಂದರೆ ಇರಬಹುದು. ನೋಂದಾಯಿತ ಕ್ರಯದ ಕರಾರಿನಂತೆ ಕ್ರಯಪತ್ರ ಬರೆದುಕೊಡದೇ ಇರುವ ಕಾರಣ ವಾದಿಯರು ನಮ್ಮ ವಿರುದ್ಧ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಮೋಸ ಮಾಡಲು ದಾವೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಕ್ರಯದ ಕರಾರಿನಂತೆ ಕ್ರಯಪತ್ರ ಬರೆದುಕೊಡುವ ಬಾಧ್ಯತೆ ನನ್ನ ಮೇಲೆ ಇದೆ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಿ.ಪಿ.1ರ ಕ್ರಯದ ಕರಾರನ್ನು ಸಾಲದ ಹಣದ ಭದ್ರತೆಗಾಗಿ

ಬರೆದುಕೊಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 1 ಎಕರೆ ವಿಸ್ತೀರ್ಣಕ್ಕೆ ಮಾತ್ರ ಕ್ರಯದ ಕರಾರು ಮಾಡಿಕೊಳ್ಳಲಾಗಿದೆ, ಒಂದು ವೇಳೆ ಹಣದ ಭದ್ರತೆಗಾಗಿ ದಾಖಲಾತಿ ಮಾಡಿಕೊಳ್ಳುತ್ತಿದ್ದರೆ ಸಂಪೂರ್ಣ ವಿಸ್ತೀರ್ಣ 2 ಎಕರೆ 36 ಗುಂಟೆಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿತ್ತು ಎಂದರೆ ಸರಿಯಲ್ಲ, ನನ್ನ ಮಕ್ಕಳನ್ನು ನ್ಯಾಯಾಲಯದ ಮುಂದೆ ಕರೆತಂದರೆ ಸತ್ಯಾಂಶ ಹೊರಬರುತ್ತದೆ ಎಂದು ಅವರನ್ನು ನ್ಯಾಯಾಲಯದ ಮುಂದೆ ಕರೆಸದೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಮಕ್ಕಳಿಗೆ ಸತ್ಯಾಂಶ ಗೊತ್ತಿರುವ ಕಾರಣ ನ್ಯಾಯಾಲಯದ ಮುಂದೆ ಅವರು ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ,

ಮರು ವಿಚಾರಣೆಃ ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.